

ದ ರೂರಲ್ ಮಿರರ್.ಕಾಂ

ಕೃಷಿ ಮಾರುಕಟ್ಟೆ | ಡಾ|ವಿಘ್ನೇಶ್ವರ ವರ್ಮುಡಿ

19-07-2025

# ಭಾರತದಲ್ಲಿ ಅಡಿಕೆ ಕೃಷಿ ಹೇಗಿದೆ..? ಎಷ್ಟು ಉತ್ಪಾದನೆಯಾಗುತ್ತಿದೆ...?

ನಮ್ಮಲ್ಲಿ ಅಡಿಕೆಯ ಕೃಷಿಯನ್ನು ಅನಾದಿ ಕಾಲದಿಂದಲೇ ನಮ್ಮ ಪೂರ್ವಜರು ಕೈಗೊಳ್ಳುತ್ತಾ ಬಂದಿದ್ದು, ಇದು ಇಂದು ಒಂದು ವ್ಯವಸ್ಥಿತ ರೀತಿಯ ಕೃಷಿಯಾಗಿ ಮಾರ್ಪಟ್ಟಿದೆ. ಇತ್ತೀಚಿನ ವರ್ಷಗಳಲ್ಲಿ ಇದರ ಕೃಷಿ ವ್ಯಾಪಕವಾಗಿ ವಿಸ್ತರಿಸುತ್ತಿದೆ.ಇದಕ್ಕೆ ಮುಖ್ಯ ಕಾರಣ ಇದರ ಬೆಲೆಯಲ್ಲಿ ಕಂಡು ಬರುತ್ತಿರುವ ಆಕರ್ಷಣೆ.

ನಮ್ಮಲ್ಲಿ ಇಂದು ಕರ್ನಾಟಕ, ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಇದೊಂದು ಪ್ರಮುಖ ಬೆಳೆಯಾಗಿದ್ದು, ಇವುಗಳೊಂದಿಗೆ ಮೇಘಾಲಯ, ತಮಿಳುನಾಡು, ಪಶ್ಚಿಮ ಬಂಗಾಳ, ಮಿಜೋರಾಂ, ಮಹಾರಾಷ್ಟ್ರ, ಆಂಧ್ರಪ್ರದೇಶ, ತ್ರಿಪುರ, ಪಾಂಡಿಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹ, ಗೋವಾ ಮತ್ತು ನಾಗಾಲ್ಯಾಂಡ್ ರಾಜ್ಯಗಳಲ್ಲಿ ಬೆಳೆಸಲಾಗುತ್ತಿದೆ.

**ರಾಜ್ಯವಾರು ಅಡಿಕೆ ಕೃಷಿ ಹೀಗಿದೆ :** ಕರ್ನಾಟಕದಲ್ಲಿ ಅಡಿಕೆ ಕೃಷಿ ವ್ಯಾಪಕವಾಗಿ ವಿಸ್ತರಿಸುತ್ತಿದೆ.ರಾಜ್ಯದ 28 ಜಿಲ್ಲೆಗಳಲ್ಲಿ ಇದು ಇದ್ದು , ಇಲ್ಲಿನ ವಿಸ್ತರಣೆಯ ವೇಗ ಇಡೀ ದೇಶದ ಅಡಿಕೆ ಕೃಷಿಯ ದೃಷ್ಟಿಯಿಂದ ಅತೀ ಹೆಚ್ಚು ಆಗಿದೆ. 2015 ರ ಸಮಯದಲ್ಲಿ ಕರ್ನಾಟಕದಲ್ಲಿ ಅಡಿಕೆ ಬೆಳೆಯ ವಿಸ್ತೀರ್ಣ ಸುಮಾರು 2,75,504 ಹೆಕ್ಟೇರ್ ಆಗಿದ್ದರೆ ಈಗ ಇದು ಸುಮಾರು 8 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಿದೆ. ಉತ್ಪಾದನೆ ದೃಷ್ಟಿಯಿಂದ ನೋಡುವುದಾದರೆ ಇದೇ ಅವಧಿಯಲ್ಲಿ ಅದು ಸುಮಾರು 4.3 ಲಕ್ಷ ಟನ್ ಗಳಿಂದ ಹತ್ತಿರ ಹತ್ತಿರ 12 ಲಕ್ಷ ಟನ್ ಆಗಿದೆ. ಈ ರೀತಿಯಾದ ವಿಸ್ತರಣೆ ಮತ್ತು ಉತ್ಪಾದನೆಗೆ ಮುಖ್ಯ ಕಾರಣ ಅಡಿಕೆಗೆ ಇಂದು ದೊರಕುತ್ತಿರುವ ಹೆಚ್ಚಿನ ಧಾರಣೆ ಮತ್ತು ಆಹಾರ ಧಾನ್ಯಗಳ ಉತ್ಪಾದನೆಗೆ ಹೆಚ್ಚುತ್ತಿರುವ ವೆಚ್ಚ.

ವಿಸ್ತೀರ್ಣ ಮತ್ತು ಉತ್ಪಾದನೆಯಲ್ಲಿ ವೇಗವಾದ ಬೆಳವಣಿಗೆಯನ್ನು ತೋರಿಸುತ್ತಿರುವ ಜಿಲ್ಲೆಗಳು ಕ್ರಮವಾಗಿ ಚಿತ್ರದುರ್ಗ, ಕೊಡಗು, ಉಡುಪಿ,ಹಾವೇರಿ, ಹಾಸನ, ಮೈಸೂರು, ಬೆಂಗಳೂರು ಗ್ರಾಮಾಂತರ, ಮಂಡ್ಯ, ವಿಜಯನಗರ, ರಾಮನಗರ,ಚಾಮರಾಜನಗರ, ಬೆಂಗಳೂರು ಪಟ್ಟಣ, ಚಿಕ್ಕಬಳ್ಳಾಪುರ, ಧಾರವಾಡ, ಬಳ್ಳಾರಿ, ಬೆಳಗಾವಿ ಇತ್ಯಾದಿಗಳಿವೆ.ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಎಲ್ಲಾ ಜಿಲ್ಲೆಗಳಲ್ಲಿ ಅಡಿಕೆ ಬೆಳೆಯ ವಿಸ್ತೀರ್ಣ ಗರಿಷ್ಟ ಮಟ್ಟದಲ್ಲಿ ಏರಿಕೆ ಕಂಡು ಬರುತ್ತಿದೆ.

ಮೇಲೆ ತಿಳಿಸಿದ ಅಂಕಿ ಅಂಶಗಳು ಮತ್ತು ಬೆಳವಣಿಗೆಯ ಗತಿ ದೇಶ ಮಾತ್ರವಲ್ಲದೆ ಅಡಿಕೆ ಬೆಳೆಯುವ ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಕರ್ನಾಟಕದ್ದು ಅತೀ ವೇಗದ್ದಾಗಿದೆ.



ಭಾರತದಲ್ಲಿ ಯಾವುದೇ ಉತ್ಪನ್ನಗಳನ್ನು ನಿಷೇಧ ಮಾಡುವುದು ಅಷ್ಟು ಸುಲಭವಲ್ಲ.ಈ ಮೊದಲು ಗುಟ್ಕವನ್ನು ಒಮ್ಮೆ ನಿಷೇಧ ಮಾಡಿದ್ದಾಗ ಅದು ಹೊಸ ರೂಪದಲ್ಲಿ ಮಾರುಕಟ್ಟೆಗೆ ಬಂತು. ಇಂತಹ ಉತ್ಪನ್ನಗಳ ಮಾರಾಟಗಾರರು ಯಾವತ್ತೂ ಬದಲೀ ಉತ್ಪನ್ನಗಳ ತಯಾರಿಗೆ ಸಾಕಷ್ಟು ಸಂಶೋಧನೆ ಮಾಡಿಯೇ ಇರುತ್ತಾರೆ. ಪ್ರಕೃತಿ,ಹವಾಮಾನ ಇವೆಲ್ಲಾ ಉತ್ಪಾದನೆಯ ಏರುಪೇರು ನಿರ್ಧರಿಸುತ್ತವೆ.ಹೀಗಿದ್ದರೂ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮುಂದೆ ಉತ್ಪಾದನೆ ಹೆಚ್ಚಾಗಿ ಧಾರಣೆ ಕುಸಿಯಬಹುದು ಎಂಬ ಪ್ರಶ್ನೆ ಬೆಳೆಗಾರರಲ್ಲಿ ಕಾಡುವುದು ಸಹಜ.ಇದರೊಂದಿಗೆ ಸರಕಾರದ ಆಂತರಿಕ ಮತ್ತು ಬಾಹ್ಯ ನೀತಿಗಳು ಅಡಿಕೆ ಬೆಳೆಯ ದೃಷ್ಟಿಯಿಂದ ಪೂರಕ ಆಗಿರದ ಕಾರಣ ಜೀವನೋಪಾಯಕ್ಕಾಗಿ ಅನಾದಿಕಾಲದಿಂದ ಇದನ್ನೇ ಅವಲಂಬಿಸಿರುವ ಸಣ್ಣ ಮತ್ತು ಮಧ್ಯಮ ವರ್ಗದ ಕೃಷಿಕರಲ್ಲಿ ಆತಂಕ ಮೂಡುವುದು ಸರ್ವೇ ಸಾಮಾನ್ಯ ಸಂಗತಿ ಆಗಿದೆ.

**ಹೆಚ್ಚಿನ ಓದಿಗೆ :** www.theruralmirror.com